dac-18
T.P-2

Rega No M 1229 | 43rd Year | Sri 'Satyavadi' Mysore | 23—3—1959

ಪ್ರಮುಖ ವರ್ತಮಾನಗಳಿಗೆ
ಅಕಸ್ಮಾತ್ತಾಗಿ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ ೬ ಆಣೆ

ಸತ್ಯವಾದಿ

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎ. ನಿ ಸುಬ್ಬರಾಯುರು [ಬಿಡಿ ಪ್ರತಿ೩ಪೈ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಭಾರತ ಪ್ರದೇಶದಲ್ಲಿ ವಿದೇಶಿ ಸೇನೆಯ ಪ್ರವೇಶಾವಕಾಶವಿಲ್ಲ

ಜಲಂಧರ 21 — ಭಾರತದ ರಕ್ಷಣಾ ಮಂತ್ರಿ ಶ್ರೀ ವಿ ಕೆ. ಕೃಷ್ಣಮೆನನ್ ರು ಬಹಿರಂಗ ಸಭೆಯಲ್ಲಿ ಭಾಷಣಮಾಡುತ್ತಾ, ಅದು ಯಾವುದೇ ಬಲವಾಗಿರಲಿ ಅಥವಾ ವಿಶ್ವಸಂಸ್ಥೆಯದೇ ಆಗಿರಲಿ ಭಾರತದ ಯಾವ ಭಾಗದಲ್ಲೇ ಆಗಲಿ ಇಡಲು ಅವಕಾಶ ಕೊಡುವದಿಲ್ಲ ಎಂದು ಈ ರಾತ್ರಿ ಇಲ್ಲಿ ಘೋಷಣೆ ಮಾಡಿದರು ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ, ಅಗಾಗ್ಗೆ ಪಾಕಿಸ್ತಾನ ಪಂಜಾಬು ಮತ್ತು ಬಂಗಾಳದ ಗಡಿಯಲ್ಲಿ ಗೋಳೀಬಾರು ನಡೆಸಿ ಶಾಂತಿ ಕಲ್ಪಿಸುತ್ತಿದೆ, ಪಂಜಾಬು ಮತ್ತು ಬಂಗಾಳ ಜನ ಬಹಳ ಕಾಲದ ವರಗೆ ಇದನ್ನು ಸಹಿಸುವುದಿಲ್ಲ ಎಂದರು.

ಸಿಕ್ಕಿರ ಚಳುವಳಿ ಅನಿವಾರ್ಯ

ಅಮೃತಸರ 22 — ಪಂ॥ ನೆಹರು ಬರೆದಿರುವ ಪತ್ರ ಕೃಪ್ತಿಕರವಾಗಿಲ್ಲವೆಂದು ಅಕಾಲಿ ದಳದ ನಾಯಕ ಮಾ॥ ತಾರಾಸಿಂಗರು ತಿಳಿಸಿದ್ದಾರೆ ಸಿಕ್ಖರ ಧಾರ್ಮಿಕ ವ್ಯವಹಾರದಲ್ಲಿ ಸರ್ಕಾರಹಸ್ತಕ್ಷೇಪ ಮಾಡುವದನ್ನು ನಿಲ್ಲಿಸದಿದ್ದರೆ ಚಳುವಳಿ ಅನಿವಾರ್ಯವೆಂದು ಅವರು ತಿಳಿಸಿದ್ದಾರೆ

ದಕ್ಷಿಣದಲ್ಲಿ ಬೆಂಬಲ

ಕಲ್ಕತ್ತಾ 21 — ಭಾರತೀಯ ಜನಸಂಘಕ್ಕೆ ದಕ್ಷಿಣದಲ್ಲಿ ಉತ್ತಮ ಬೆಂಬಲ ವಿದೆಯೆಂದು ಜನಸಂಘದ ಅಧ್ಯಕ್ಷರಾದ ಶ್ರೀ ದೀವಪ್ಪನವರು ಘೋಷಿಸಿದರು

ಆಹಾರ ಪೊಟ್ಟಣಗಳು

ಭಾರತೀಯ ರೈಲ್ವೆಗಳಲ್ಲಿ ಆಹಾರದ ಪೊಟ್ಟಣಗಳನ್ನು ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುವದನ್ನು ಆರಂಭಿಸಲಾಗಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ನಾಗ್ಪುರ ನಿರ್ಣಯ ವಿರೋಧಿಗಳು ಜ್ಞಾನಹೀನರು

ನವದೆಹಲಿ 22 — ಸಹಕಾರ್ಯ ವ್ಯವಸಾಯ ಪದ್ಧತಿಯನ್ನು ತಕ್ಷಣವೇ ಕೈಗೊಳ್ಳುವದು ಉತ್ತಮವಾದ ಮಾರ್ಗ ಎಂದು ಪಂ॥ ನೆಹರು ತಿಳಿಸಿದರು ಶ್ರೀಮತಿ ಇಂದಿರಾ ಗಾಂಧಿಯವರಿಗೆ ದೆಹಲಿಯ ಪೌರಸಭೆ ಸ್ವಾಗತವನ್ನಿತ್ತ ಸಂದರ್ಭದಲ್ಲಿ ಭಾಷಣ ಮಾಡುತ್ತಾ ಈ ರೀತಿ ತಿಳಿಸಿದ ನೆಹರು, ಜ್ಞಾನಹೀನರು ನಾಗ್ಪುರ ನಿರ್ಣಯಗಳನ್ನು ವಿರೋಧಿಸುವರು ಎಂದರು.

ಶುಕ್ರಗ್ರಹದಿಂದ ಶಬ್ದ

ವೆಸ್ಟ್‌ಫೋರ್ಡ್ (ಮೆಸಾಚುಸೆಟ್ಸ್) 22 — ಶುಕ್ರಗ್ರಹದಿಂದ ಶಬ್ದ ಬರುತ್ತಿದೆ ಎಂದು ಅವೇರಿಕಾ ವಿಜ್ಞಾನಿಗಳು ತಿಳಿಸಿದ್ದಾರೆ

ದೇಶಾದ್ಯಂತ ಚಳವಳಿ

ಲಕ್ನೋ 21 — ಬೆರುಬರಿಯನ್ನು ಪಾಕಿಸ್ತಾನಕ್ಕೆ ವರ್ಗಾಯಿಸುವ ಯೋಜನೆ ಬಗ್ಗೆ ತಮ್ಮ ಪಕ್ಷವು ದೇಶಾದ್ಯಂತ ಚಳವಳಿ ಹೂಡುವುದೆಂದು ಅಖಿಲ ಭಾರತೀಯ ಜನಸಂಘದ ಕಾರ್ಯದರ್ಶಿ ಉಪಾಧ್ಯಾಯರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.

ಚರ್ಚೆಯಿಲ್ಲ

ನವದೆಹಲಿ 21 — ಮೈಸೂರು ಮತ್ತು ಬೊಂಬಾಯಿ ಗಡಿ ಸಮಸ್ಯೆ ಸಧ್ಯದಲ್ಲಿ ಚರ್ಚೆ ನಡೆಯುವ ಸಂಭವವಿಲ್ಲವೆಂದು ಮೈಸೂರಿನಿಂದ ಬಂದಿರುವ ಪಲವು ಪಾರ್ಲಿಮೆಂಟು ಸದಸ್ಯರ ಅಭಿಪ್ರಾಯವಾಗಿದೆ.

ಚಳವಳ ನಿಂತಿದೆ

ಚಂಡೀಘರ 22 — ಕಮ್ಯುನಿಸ್ಟು ನಾಯಕತ್ವದ ಕಿಸಾನ್ ಸಭೆಯು ಒಂದೂವರೆ ತಿಂಗಳ ಅಭಿವೃದ್ಧಿ ತೆರಿಗೆ ವಿರೋಧ ಚಳುವಳಿಯನ್ನು ವಾಪಸು ಪಡೆಯಲಾಗಿದೆ

ಸಕ್ಕರೆ ಉತ್ಪಾದನೆ

ನವದೆಹಲಿ 22 — ಮೂರನೆಯ ಯೋಜನೆಯಲ್ಲಿ ಬಿಳಿ ಸಕ್ಕರೆ 30 ಲಕ್ಷ ಟ್ಟ ಉತ್ಪಾದನೆಯ ಗುರಿ ಮತ್ತು 50 ಲಕ್ಷ ಟ್ಟ ಬೆಲ್ಲ ಮತ್ತು ಖಂಡಸಾರಿ ಉತ್ಪಾದನೆಯ ಗುರಿ ಹೊಂದಬೇಕೆಂದು ಭಾರತ ಕೇಂದ್ರ ಸಕ್ಕರೆ ಸಮಿತಿ ಸೂಚಿಸಿದೆ.

ಮರು ವಿಮರ್ಶೆ

ನವದೆಹಲಿ 22 — ಇಂಡಿಯನ್ ಪೀನಲ್ ಕೋಡಿನ ಪುನರ್ವಿಮರ್ಶೆಯನ್ನು ಲಾ ಕಮಿಷನ್ ಕೈಗೊಂಡಿದೆ

ಮೈಸೂರಿಗೆ ಸೇರಬೇಕು

ಸೋಲಾಪುರ 21— ಸೋಲಾಪುರ ಪಟ್ಟಣ, ಅಕಲಕೋಟೆ, ವನಲ್ವೇಡಾ, ಸಂಗೋವಾ ಮತ್ತು ಇತರ ಕನ್ನಡ ಮಾತನಾಡುವ ಭಾಗ ಸೇರಿದ ದಕ್ಷಿಣ ಸೋಲಾಪುರವನ್ನು ಮೈಸೂರು ರಾಜ್ಯಕ್ಕೆ ಸೇರಿಸಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಮಾಡುವ ನಿರ್ಣಯವನ್ನು ಅಖಿಲ ಕರ್ನಾಟಕ ಗಡಿ ಸಮಿತಿ ಮಂಜೂರು ಮಾಡಿದೆ.

ಬಿಡುಗಡೆ

ಚಂಡೀಘರ್ 21 — ಪಂಜಾಬಿನಲ್ಲಿ ಬಂಧಿತರಾಗಿರುವ ಎಲ್ಲಾ ಅಹಾರಾ ಚಳುವಳಿಗಾರರನ್ನು ಬಿಡುಗಡೆ ಮಾಡಲು ಪಂಜಾಬು ಸರಕಾರವು ನಿರ್ಧರಿಸಿದೆ

ವಿವಿಧ ವರ್ತಮಾನ

ಬೊಂಬಾಯಿ 20— ಶಾಸನಸಭೆಯಲ್ಲಿ ಮಂತ್ರಿಗಳು ಹಾಜರಿರಲಿಲ್ಲವಾಗಿ ಅಧ್ಯಕ್ಷರು ಸಭೆಯನ್ನು 15 ನಿಮಿಷ ಮುಂದಕ್ಕೆ ಹಾಕಿದರು — ಈ ರೀತಿ ಬೊಂಬಾಯಿ ಶಾಸನಸಭೆ ಇತಿಹಾಸದಲ್ಲೇ ನಡೆದಿಲ್ಲವೆಂದೂ, ಮಂತ್ರಿಗಳ ಈ ವರ್ತನೆ ಸಭೆಗೆ ಅಗೌರವವಾದುದೆಂದೂ ಅಧ್ಯಕ್ಷರು ನುಡಿದರು.

ಕರಾಚಿ 21— ಮುಜಫರಾಬಾದಿನಲ್ಲಿರುವ ಯುದ್ಧಸ್ಮಾರಕ ಬೀಜೆಯನ್ನು ಭಾರತ ಸೈನಿಕರು ಕಾ॥ 16 ಆಕ್ಷೇಪಿಸಿರುವದೆಂದು ವಿಶ್ವಸಂಸ್ಥೆ ವೀಕ್ಷಕರಿಗೆ ಪಾಕಿಸ್ತಾನವು ಪ್ರತಿಭಟನಾಪತ್ರ ಸಲ್ಲಿಸಿದೆ.

ಮದರಾಸು 21— ಭಾರತದಲ್ಲಿರುವುದಕ್ಕಿಂತಲೂ ಹೆಚ್ಚಾಗಿ ಜಪಾನಿನಲ್ಲಿ ಹಿಂದೂ ವಿಗ್ರಹಗಳಿರುವುವೆಂದು ಭಿಕ್ಷು ಧರ್ಮಲೋಕರು ಅಭಿಪ್ರಾಯ ವ್ಯಕ್ತ ಪಡಿಸಿರುವರು.

ಚಂಡೀಘರ 21— ಕಮ್ಯುನಿಸ್ಟ್ ನಾಯಕ ಎ ಕೆ ಗೋಪಾಲ್ ಮೇಲೆ ಎಧಿಸಿದ್ದ ರಾಜ್ಯದೊಳಕ್ಕೆ ಪ್ರವೇಶಿಸಬಾರದೆಂಬ ನಿಷೇಧಾಜ್ಞೆಯನ್ನು ಪಂಜಾಬು ಸರಕಾರ ವಾಪಸ್ಸು ತೆಗೆದುಕೊಂಡಿದೆ.

ಬೆಳಗಾಂ 21— ಬೆಳಗಾವಿನ 100 ಗ್ರಾಮಗಳಲ್ಲಿ ಕಂದಿರಾಕರಣ ಚಳವಳವನ್ನು ಹೂಡಲು ಮಹಾರಾಷ್ಟ್ರ ಏಕೀಕರಣ ಸಮಿತಿಯ ಕಾರ್ಯಾಚರಣಾ ಕಮಿಟಿಯು ನಿರ್ಧರಿಸಿದೆ.

ಅವ್ಯಕ್ತಸರ 21— ಬಂಧಿಸಲ್ಪಟ್ಟಿದ್ದ ಮಾಸ್ಟರ್ ತಾರಾಸಿಂಗರು ಈ ದಿನ ಬಿಡುಗಡೆ ಮಾಡಲ್ಪಟ್ಟರು.

ನಾಳೆಯ ಪಂಚಾಂಗ

ಶ್ರೀ ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

24 ಪೂರ್ಣಿಮ ಉತ್ತರ
ಸೂಡನೆ — ಹೋಳಿ ಪ್ರಯುಕ್ತ ನಾಳೆ

ಸರ್ವೋದಯ ತತ್ವ

(ಮುಂದುವರಿದುದು)

ಸರಿಯಾಗಿ ವಿಚಾರಮಾಡಿ ನೋಡಿದರೆ ನಮ್ಮಲ್ಲಿನ್ನಿಸಿಕೊಳ್ಳುವುದಾವುದೂ ನಮ್ಮ ಜಗತ್ತಿನಲ್ಲಿಲ್ಲ : ಕಣಜದ ತುಂಬಾ ಭತ್ತ ವಿದ್ದರೂ ನಮ್ಮ ಪಾಲಿಗೆ ಹೊತ್ತಿಗೆ ಒಂದು ಪಾವು ಅಕ್ಕಿ ಮಾತ್ರ ; ಕೊಟ್ಟಿಗೆ ತುಂಬಾ ದನವಿದ್ದರೂ ಒಂದೇ ಲೋಟ ಹಾಲು ಮಾತ್ರ ; ಪೆಟ್ಟಿಗೆ ತುಂಬಾ ಬಟ್ಟೆಯಿದ್ದರೂ ಹೊತ್ತಿಗೆ ಮೈಮೇಲೆ ಒಂದು ವಸ್ತ್ರ ಎಂಬುದನ್ನು ನಾವು ಮರೆಯಬಾರದು. .... ಹಾಗೆಯೇ ನಾವು ಎಷ್ಟು ದುಡಿದರೂ ಎಷ್ಟು ಸಂಪಾದಿಸಿದರೂ ಅದೆಲ್ಲವೂ ಇತರರಿಗೆ ವಿನಿಯೋಗಕ್ಕಾಗಿ ಅಲ್ಲದೆ ತನಗೆ ಮಾತ್ರ ಋಣವಿದ್ದಹ್ದೇ ಎಂಬುದನ್ನು ಮರೆಯಬಾರದು

ಜಗತ್ತಿನಲ್ಲಿ ಈಗ ಎದ್ದಿರುವ ಸಮಸ್ಯೆಗಳೆಲ್ಲಾ ಅನ್ನ ವಸ್ತ್ರಗಳಿಗೆ ಸಂಬಂಧಪಟ್ಟದ್ದು ; ಅನ್ನವು ದೇಹಕ್ಕೆ, ವಸ್ತ್ರವು ಅದನ್ನು ಮುಚ್ಚುವುದಕ್ಕೆ, ನಾವು ದೇಹವಲ್ಲ, ದೇಹದೊಳಗೆ ಕರ್ಮ ಸಂಬಂಧದಿಂದ ಬಂದು ಕೆಲವು ಕಾಲ ವ್ಯವಹಾರ ಮಾಡಿ ಈ ದೇಹವನ್ನು ಬಿಟ್ಟು ಹೋಗುವವರು ನಾವು ; ನಮ್ಮ ತೃಪ್ತಿಯು ದೇಹರಕ್ಷಣೆಯೊಂದೇ ಅಲ್ಲ : ನಮ್ಮ ನಿಜವಾದ ಅಸ್ತಿಯು ಮನಶ್ಶಾಂತಿಯು ; ಅದರ ಸಾಧನೆಗಾಗಿಯೇ ಮನುಷ್ಯ ಜನ್ಮ ಬಂದಿರುವುದು ಎಂಬುದನ್ನು ಮರೆಯಬಾರದು

ಅನ್ನವಸ್ತ್ರಗಳು ಎಲ್ಲರಿಗೂ ಸಮನಾಗಿ ಹಂಚಲ್ಪಡುವುದು ನಿಜ ; ಧನಿಕನನ್ನು ಕೆಳಗಿಳಿಸಿ, ದರಿದ್ರನ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸುವುದರಲ್ಲಿ ಮಾತ್ರ ಸಾಧ್ಯವಾಗುವು; ಅದರಿಂದ ಇಚ್ಛಾದ್ವೇಷ ಮದಮಾತ್ಸರ್ಯಾದಿಗಳು ಹೆಚ್ಚಿ ಸಮಾಜಕ್ಕೆ ಹಾನಿಯಾಗಬಹುದು : ನಮ್ಮ ದೇಹಕ್ಕಂತೂ ಸರಿಹೋಗುವುದಿಲ್ಲ ; ಧನಿಕನನ್ನೂ, ದರಿದ್ರನನ್ನೂ ಒಂದೇ ತಕ್ಕಡಿಯಲ್ಲಿಟ್ಟು ಸಮಬಲ ಸ್ವಂಯಾದವನ್ನು ಸಮಮಾಡಲಿತ್ನಿಸುವುದು ಸಾಧ್ಯವಾಗದ ಮಾತು ; ಅದರೆ ಧನಿಕನನ್ನೂ ದರಿದ್ರನನ್ನೂ ಪರಮಾತ್ಮನ ವಧ್ಯೆ ನಿಲ್ಲಿಸಿ ಮನಶ್ಶಾಂತಿಯ ಬೀಜವನ್ನು ಕಂಡುಹಿಡಿಯುವುದು ಆರ್ಯಸಂಸ್ಕೃತಿಯ ವೈಶಿಷ್ಟ್ಯ.

ಧನಿಕನ ಮತ್ತು ದರಿದ್ರನ ನಡುವೆ ಪರಸ್ಪರ ಅಸೂಯೆ, ದ್ವೇಷಾಸೂಯೆ, ಅಶಾಂತಿಗಳಿಗೆ ಅವಕಾಶವಾಗದಿರುವ ರೀತಿಯ ಸಂವಿಧಾನವು ನಿಷ್ಪಕ್ಷಪಾತವಾದ ಧರ್ಮಾನುಸರಣೆಯಿಂದ ಮಾತ್ರ ಸಾಧ್ಯ.

ಯು ॥ ಡ್ಯಾಗ್ ಕಾಶ್ಮೀರದಲ್ಲಿ

ಶ್ರೀನಗರ 21— ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಯು ॥ ಡ್ಯಾಗರು ಇಂದಿಗೆ ಭೇಟಿ ಕೊಟ್ಟು ವಿಶ್ವಸಂಸ್ಥೆಯ ವೀಕ್ಷಕರು ಭಾರತ ಮತ್ತು ಪಾಕಿಸ್ತಾನಿ ಸೈನ್ಯಗಳ ಮಧ್ಯೆ ಕೆಲಸ ನಡೆಸುತ್ತಿರುವುದನ್ನು ನೋಡಿದರು ;

ಭಾರತೀಯರಿಗೆ ಸಂಬಳಗಳು

1959 ರಲ್ಲಿ ವಿದೇಶೀ ಸಂಸ್ಥೆಗಳಲ್ಲಿ ಒಟ್ಟು 12356 ಮಂದಿ ಉದ್ಯೋಗಿಗಳಿದ್ದರು ; ಅವರಲ್ಲಿ 6704 ಮಂದಿ ಭಾರತೀಯರು — ವಿದೇಶೀ ಸಂಸ್ಥೆಗಳಲ್ಲಿರುವ ಭಾರತೀಯರಲ್ಲಿ ತಿಂಗಳಿಗೆ 1000 – 1500 ರೂಗಳ ವೇತನ ವರ್ಗದವರ ಸಂಖ್ಯೆಯು 1958 ರಲ್ಲಿ ನೂರಕ್ಕೆ 84-2 ರಷ್ಟಕ್ಕೆ ಏರಿದೆ : 1501 – 2000 ರೂಗಳ ವೇತನ ವರ್ಗದಲ್ಲಿ 62-2 ಕ್ಕೂ, 2001–3000 ರೂಗಳ ವೇತನದಲ್ಲಿ 36-5 ಕ್ಕೂ 3001–5000 ರೂಗಳ ವೇತನ ವರ್ಗದಲ್ಲಿ 16-5 ಕ್ಕೂ, 5001 ರೂಗಳಿಗೂ ಹೆಚ್ಚಿನ ವೇತನ ವರ್ಗದಲ್ಲಿ 6-0 ಕ್ಕೂ ಏರಿದೆ — 10000 ರೂಗಳು ಮತ್ತು ಅದಕ್ಕೂ 1000 ರೂಗಳು ಮತ್ತು ಅದಕ್ಕೂ ಹೆಚ್ಚಿನ ವೇತನಗಳ ಹುದ್ದೆಗಳಲ್ಲಿ ಕೆಲಸಕ್ಕೆ ನೇಮಿಸಿಕೊಂಡ 12356 ಮಂದಿಯ ಮಾಸಿಕ ವೇಜ್ ಬಿಲ್ ಲೆಕ್ಕಾಚಾರ ಮಾಡಿದಾಗ ಸುಮಾರು 285 ಲಕ್ಷ ರೂಗಳಷ್ಟಾಗುವುದು ; ಇದರಲ್ಲಿ ಸುಮಾರು 108 ಲಕ್ಷ ರೂಗಳನ್ನು ಭಾರತೀಯರಿಗೆ ಕೊಡಲಾಗುತ್ತಿದೆ

ವುಡ್‌ಲ್ಯಾಂಡ್ಸ್ ಜನಪ್ರಿಯತ 2 ನೇ ವಾರ

ಕಾಲಾಪಾನಿ (ಹಿಂದಿ)

ಅತ್ಯುತ್ತಮ ಪತ್ತೇದಾರಿ ಕಥಾವಸ್ತು — [ದಿನ 3 ಪ್ರದರ್ಶನಗಳು

ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಚಿತ್ರ — ನೋಡಲು ಮರೆಯಬೇಡಿ

ತಾರಾಗಣ— ದೇವ್‌ಆನಂದ್, ಮಧುಬಾಲ, ನಳಿನಿಜಯವಂತ್, ಕಿಶೋರ್‌ಸಾಹು

ದಿಗ್ದರ್ಶನ : ರಾಜ್ ಖೋಸ್ಲಾ ಸಂಗೀತ : ಎಸ್. ಡಿ. ಬರ್ಮನ್

ಅಪೇರಾ— 20–3–59 ರಿಂದ

ಅತ್ಯಮೋಘ ಕನ್ನಡ ಚಿತ್ರ ಪ್ರತಿದಿನ 3 ಆಟಗಳು

ಕಪ್ಪು ಗಾರುಡಿ (ಕನ್ನಡ)

ತಾರಕ್ — ರಾಜಕುಮಾರ್, ಕಾಮಣ್ಣಚಂದ್ರಶಾಸ್ತ್ರಿ, ನರಸಿಂಹರಾಜು, ಗಣಪತಿಭಟ್

ರಮಾದೇವಿ, ರೇವತಿ, ಸೂರ್ಯಕಲಾ, ಲಲಿತಾಂತಾವ್ ಬಿ. ಎ.

ಗೋಂಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು

Advertise in Goraksana and help the pious cause

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ಪ್ರಧಾನ ಮಂತ್ರಿ ಜವಹರಲಾಲ್ ನೆಹರೂರವರೊಂದಿಗೆ— ಎಡದಿಂದ ಬಲಕ್ಕೆ : ಎಚ್. ಮುಖಿತ ದಿನೋವ್, ಜವಾಹರಲಾಲ್ ನೆಹರೂ, ಕೆ ಪಿ ಎಸ್ ಮೆನನ್, ಎ ಎ ಆಂಡ್ರೆಯೆವ್, ದುಬಾಷಿ, ಎಂ ಐ ಕುಚಾವಾ ಪಿ ಕೆ ಪೊನೊವುರೆಂಕೋ.

Edited, Printed & Published by
Dharma Prachara Nivas M.
Krishna Rao, at the Satyavadi
Press Chamarajapuram, Mysore.